'ಕ್ರಾಂತಿ ಆಗ್ಬೇಕರಯ್ಯ ಕ್ರಾಂತಿ. ಈ ದೇಶದಲ್ಲಿ ಯಾವುದೂ ಸುಲಭವಾಗಿ ಬದಲಾಗೊಲ್ಲ. ಒಂದು ವೈಚಾರಿಕ ಕ್ರಾಂತಿಯಾಗಿ ಜನರಲ್ಲಿ ತಿಳಿವಳಿಕೆ ಮೂಡ್ಬೇಕು. ಶಾಲೆ ಪಕ್ಕದಲ್ಲಿ ಬೆಳೆದು ನಿಂತ ಗಿಡಕ್ಕೆ ಈ ಜನ ಎಂಥ ದುರ್ಗತಿ ತಂದಿದ್ದಾರೆ ನೋಡಿದ್ರೇನ್ರೋ. ಕಟ್ಟೆ ಕಟ್ಟಿ, ಅದಕ್ಕೆ ಬಟ್ಟೆ ಸುತ್ತಿ, ಸುತ್ತೆಲ್ಲ ಎಣ್ಣೆ ದೀಪ ಹಚ್ಚಿ, ಭಯಪಡೊವಷ್ಟು ಕುಂಕುಮ ಅರಿಸಿನ ಚೆಲ್ಲಿ ಇನ್ನೂ ಯಾವ ಸ್ಥಿತಿಗೆ ತಂದಿಡ್ತಾರೊ. ಮರ ಬೆಳೆದ ಆ ಜಾಗ ಪವಿತ್ರ, ಪುಣ್ಯ ಅಂತ ಹೇಳಿ ಜನರನ್ನ ಭಯ ಬೀಳಿಸ್ತಾರೆ. ಯಾವುದೋ ಹಕ್ಕಿ ತನ್ನ ಉದರ ಬಾಧೆ ತಾಳದೆ ಹೇತು ಅದರೊಳಗಿದ್ದ ಬೀಜದಿಂದ ಬೆಳೆದ ಗಿಡ ಅದು. ಇಂಥ ಮೂಢ ಆಚರಣೆಗಳನ್ನೆಲ್ಲ ಬಿಟ್ಟು ನೇರಳೆ ಮರದ ಕೆಳಗೆ ನಾಲ್ಕಾರು ಪುಸ್ತಕಗಳನ್ನಿಟ್ಟಿದ್ದರೆ ಅವುಗಳನ್ನು ಓದಿ ಅದರಿಂದ ತಿಳಿವಳಿಕೆ ಮೂಡಿ ಒಂದು ವೈಚಾರಿಕ ಕ್ರಾಂತಿ ಆದರೂ ಆಗ್ತಿತ್ತು' ದೊಕಾಚಿ ಮೇಷ್ಟ್ರು ಕಾಲ್‌ಮಾರ್ಕ್ಸ್‌ನನ್ನೋ ಲೆನಿನ್‌ನನ್ನೋ ಮೈಮೇಲೆ ಆವಾಹಿಸಿಕೊಂಡವರಂತೆ ತಮ್ಮ ವಿಚಾರಗಳನ್ನು ಓತಪ್ರೋತವಾಗಿ ಹರಿಬಿಡುತ್ತಿದ್ದರೆ ಅವರೆದುರು ಕುಳಿತ ಮಕ್ಕಳು ಅರ್ಥವಾಗದೆ ಮೇಷ್ಟ್ರನ್ನೇ ಪಿಳಿಪಿಳಿ ಕಣ್ಣು ಬಿಟ್ಟು ನೋಡುತ್ತಿದ್ದವು. ದೊಕಾಚಿ ಮೇಷ್ಟ್ರು ಇವತ್ತೇಕೋ ಒಂದಿಷ್ಟು ರಾಂಗ್ ಆಗಿದ್ದಾರೆ ಅನಿಸಿದ್ದೆ ತಮ್ಮ ಕ್ರಾಂತಿಯ ಮಾತುಗಳಿಂದ ಅವರು ಸದ್ಯಕ್ಕೆ ಹೊರಬರಲಾರರು ಎನ್ನುವುದು ಮಕ್ಕಳಿಗೆ ಲಾಗಾಯ್ತಿನಿಂದಲೂ ರೂಢಿಯಾಗಿದ್ದರಿಂದ ಗುಜುಗುಜು ಮಾತನಾಡುತ್ತ ಆ ಸದ್ದು ಕ್ರಮೇಣ ದೊಡ್ಡದಾಗುತ್ತ ಮೇಷ್ಟ್ರ ಚಿಂತನೆಗೆ ಭಗ್ನಬಂದಿದ್ದೆ ಉರಿಗಣ್ಣು ಬಿಟ್ಟು ನೇರವಾಗಿ ಲಂಬರೇಖೆಯಲ್ಲಿ ತಮಗೆದುರಾಗಿ ಕುಳಿತಿದ್ದ, ನಿನ್ನೆಯಷ್ಟೆ ಶಾಲೆಗೆ ದಾಖಲಾಗಿದ್ದ ಹುಡುಗನನ್ನೇ ದಿಟ್ಟಿಸಿ ನೋಡುತ್ತ, 'ಏನೋ ನಿನ್ನ ಹೆಸರು' ಎಂದು ಕೇಳಿದರು. ಮೇಷ್ಟ್ರ ಉಗ್ರರೂಪಕ್ಕೆ ಹೆದರಿ ಚಡ್ಡಿಯಲ್ಲೇ ಉಚ್ಚೆ ಹೊಯ್ದುಕೊಂಡ ಹುಡುಗ ತಡವರಿಸುತ್ತ ಉತ್ತರಿಸಿದ, 'ಕಮೂ ಸರ್'. ಆ ಹುಡುಗ ಹೇಳಿದ ಹೆಸರು ಕೇಳಿದ್ದೆ ದೊಕಾಚಿ ಮೇಷ್ಟ್ರ ಸಿಟ್ಟೆಲ್ಲ ಜರ್‍ರನೆ ಇಳಿದು ಮುಖದ ಮೇಲೆ ಪ್ರಸನ್ನತೆ ಮೂಡಿತು. ಮೇಷ್ಟ್ರು ಅನುಮಾನ ಪರಿಹರಿಸಿಕೊಳ್ಳಲೆಂಬಂತೆ ಮತ್ತೊಮ್ಮೆ ಕೇಳಿದಾಗ ಹುಡುಗ ಅಂಜುತ್ತಲೇ, 'ಕಮೂ ಸರ್' ಅಂದವನೆ ಚಡ್ಡಿಯೊಳಗಿಂದ ತೊಟ್ಟಿಕ್ಕುತ್ತಿದ್ದ ಉಚ್ಚೆಯ ಹನಿ ಇಡೀ ಕ್ಲಾಸಿಗೆ ಪ್ರದರ್ಶಿತವಾದ ಅವಮಾನದಿಂದ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದ. ದೊಕಾಚಿ ಮೇಷ್ಟ್ರಿಗೆ ಮರಳುಗಾಡಿನಲ್ಲಿ ನೀರು ಸಿಕ್ಕಷ್ಟೇ ಖುಷಿಯಾಗಿತ್ತು ಹುಡುಗನ ಹೆಸರು ಕೇಳಿ. ಅಕ್ಷರದ ಗಂಧಗಾಳಿ ಗೊತ್ತಿಲ್ಲದ ಈ ಕುಗ್ರಾಮದ ಗೊಡ್ಡು ಜನರ ನಡುವೆ ತನ್ನೊಳಗಿನ ವೈಚಾರಿಕ ಚಿಂತನೆ ವ್ಯರ್ಥವಾಗುತ್ತಿದೆ ಎಂದು ನಿರಾಶರಾದವರು ಎದುರು ನಿಂತ ಕಮೂನನ್ನು ಆ ಮೇರು ಬರಹಗಾರ ಆಲ್ಬರ್ಟ್ ಕಮೂನೇನೋ ಎನ್ನುವಂತೆ ಅವನನ್ನು ವಿವಿಧ ಕೋನಗಳಿಂದ ದಿಟ್ಟಿಸಿ ನೋಡಲಾರಂಭಿಸಿದರು. ದೊಕಾಚಿ ಮೇಷ್ಟ್ರೇಕೆ ತನ್ನನ್ನು ಅಷ್ಟೊಂದು ಸುದೀರ್ಘವಾಗಿ ದಿಟ್ಟಿಸಿ ನೋಡುತ್ತಿರುವರೆನ್ನುವುದು ತರಗತಿಯಲ್ಲಿನ ಇತರ ಮಕ್ಕಳಿಗಿರಲಿ ಸ್ವತಃ ಕಮೂಗೂ ಅರ್ಥವಾಗದೆ ಅವರೆಲ್ಲ ಒಬ್ಬರ ಮುಖ ಇನ್ನೊಬ್ಬರು ನೋಡಿ ತಮ್ಮ ತಮ್ಮ ಮುಖದಲ್ಲಿ ಪ್ರಶ್ನಾರ್ಥಕ ಚಿನ್ಹೆ ಮೂಡಿಸಿಕೊಂಡರು. ನಿಂತು ಕಾಲು ನೋಯಲಾರಂಭಿಸಿದಾಗ ಕಮೂ ಒಮ್ಮೆ ಬಲಗಾಲಿನ ಮೇಲೂ ಇನ್ನೊಮ್ಮೆ ಎಡಗಾಲಿನ ಮೇಲೂ ತನ್ನ ದೇಹದ ಭಾರವನ್ನು ವರ್ಗಾಯಿಸುತ್ತ ನಿಂತ ಭಂಗಿಯನ್ನು ಗಳಿಗೆಗೊಮ್ಮೆ ಬದಲಿಸುತ್ತಿರುವಾಗ ಮೇಷ್ಟ್ರ ಇನ್ನೊಂದು ಪ್ರಶ್ನೆ ತೂರಿಬಂತು, 'ನಿನ್ನ ಅಪ್ಪನ ಹೆಸರೇನೋ'. 'ಬೋದಿಲೇರ ಸರ್' ಕಮೂ ಬಾಯಿ ತೆರೆಯುವ ಮೊದಲೆ ಅವನ ಹಿಂದೆ ಕುಳಿತಿದ್ದ ಹುಡುಗ ಜೋರಾಗಿ ಉತ್ತರಿಸಿದ. ಬೋದಿಲೇರನ ಹೆಸರು ಕೇಳಿದ್ದೆ ದೊಕಾಚಿ ಮೇಷ್ಟ್ರಿಗೆ ಎದ್ದು ಕುಣಿಯುವಷ್ಟು ಖುಷಿಯಾಗಿತ್ತು. ಆ ಕ್ಷಣಕ್ಕೆ ಅವರಿಗೆ ಇಡೀ ಊರು ಆಕ್ಸ್‌ಫರ್ಡ್‌ನಂತೆಯೂ, ಆ ಕನ್ನಡ ಶಾಲೆ ಒಂದು ವಿಶ್ವವಿದ್ಯಾಲಯವಾಗಿಯೂ, ತಮ್ಮೆದುರು ಕುಳಿತಿದ್ದ ಮಕ್ಕಳೆಲ್ಲ ಶೇಕ್ಸ್‌ಪಿಯರ್‌ನ ವಾರಸುದಾರರಂತೆಯೂ ಗೋಚರಿಸಲಾರಂಭಿಸಿತು. 'ಲೋ ಕಮೂ ನಾಳೆ ನಿನ್ನಪ್ಪ